ಓ ಅಲ್ಲಾಹ್! ನಿನ್ನ ಕೋಪದಿಂದ ನಿನ್ನ ತೃಪ್ತಿಯಲ್ಲಿ ಮತ್ತು ನಿನ್ನ ಶಿಕ್ಷೆಯಿಂದ ನಿನ್ನ ಕ್ಷೇಮದಲ್ಲಿ ನಾನು ರಕ್ಷಣೆಯನ್ನು ಬೇಡುತ್ತೇನೆ. ನಿನಗೆ ವಿರುದ್ಧವಾಗಿ ನಿನ್ನಲ್ಲೇ ನಾನು ಆಶ್ರಯವನ್ನು ಬೇಡುತ್ತೇನೆ. ನೀನು ನಿನ್ನನ್ನು ಪ್ರಶಂಸಿಸಿದಂತೆ ನನಗೆ ನಿನ್ನ ಪ್ರಶಂಸೆಯನ್ನು ಎಣಿಸಲು ಸಾಧ್ಯವಿಲ್ಲ

ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳುತ್ತಾರೆ: ಒಂದು ರಾತ್ರಿ ನಾನು ಅಲ್ಲಾಹನ ಸಂದೇಶವಾಹಕರನ್ನು ಹಾಸಿಗೆಯಲ್ಲಿ ಕಾಣದೆ ಹೋದಾಗ ಅವರನ್ನು ಹುಡುಕಿದೆ. ನನ್ನ ಕೈ ಅವರ ಪಾದಗಳ ನಡುಭಾಗಕ್ಕೆ ತಾಗಿತು. ಅವರು ಮಸೀದಿಯಲ್ಲಿ ನಮಾಝ್ ಮಾಡುತ್ತಿದ್ದರು ಮತ್ತು ಅವರ ಪಾದಗಳು ನೆಟ್ಟಗಿದ್ದವು (ಅವರು ಸಾಷ್ಟಾಂಗ ಮಾಡುತ್ತಿದ್ದರು). ಅವರು ಹೇಳುತ್ತಿದ್ದರು: "ಓ
ಅಲ್ಲಾಹ್! ನಿನ್ನ ಕೋಪದಿಂದ ನಿನ್ನ ತೃಪ್ತಿಯಲ್ಲಿ ಮತ್ತು ನಿನ್ನ ಶಿಕ್ಷೆಯಿಂದ ನಿನ್ನ ಕ್ಷೇಮದಲ್ಲಿ ನಾನು ರಕ್ಷಣೆಯನ್ನು ಬೇಡುತ್ತೇನೆ. ನಿನಗೆ ವಿರುದ್ಧವಾಗಿ ನಿನ್ನಲ್ಲೇ ನಾನು ಆಶ್ರಯವನ್ನು ಬೇಡುತ್ತೇನೆ. ನೀನು ನಿನ್ನನ್ನು ಪ್ರಶಂಸಿಸಿದಂತೆ ನನಗೆ ನಿನ್ನ ಪ್ರಶಂಸೆಯನ್ನು ಎಣಿಸಲು ಸಾಧ್ಯವಿಲ್ಲ."
[صحيح] [رواه مسلم]

ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಹೇಳಿದರು: ನಾನು ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪಕ್ಕದಲ್ಲಿ ಮಲಗಿದ್ದೆ. ರಾತ್ರಿಯಲ್ಲಿ ಅವರನ್ನು ಕಾಣದಾದಾಗ, ನಾನು ನನ್ನ ಕೈಯಿಂದ ಅವರು ಕೋಣೆಯಲ್ಲಿ ನಮಾಝ್ ಮಾಡುತ್ತಿದ್ದ ಜಾಗವನ್ನು ತಡಕಾಡಿದೆ. ಅವರು ಸಾಷ್ಟಾಂಗ ಮಾಡುತ್ತಿದ್ದರು ಮತ್ತು ಅವರ ಪಾದಗಳು ನೆಟ್ಟಗಿದ್ದವು. ಅವರು ಹೇಳುತ್ತಿದ್ದರು: "ನಾನು ರಕ್ಷಣೆಯನ್ನು ಬೇಡುತ್ತೇನೆ" ಅಂದರೆ ನಾನು ತವಸ್ಸುಲ್ ಮಾಡುತ್ತೇನೆ. "ನಿನ್ನ ಕೋಪದಿಂದ ನಿನ್ನ ತೃಪ್ತಿಯಲ್ಲಿ" ಅಂದರೆ, ನನ್ನ ಮೇಲೆ ಅಥವಾ ನನ್ನ ಸಮುದಾಯದ ಮೇಲೆ ನಿನಗಿರುವ ಕೋಪದಿಂದ. "ಮತ್ತು" ನಾನು ರಕ್ಷಣೆ ಪಡೆಯುತ್ತೇನೆ "ನಿನ್ನ ಕ್ಷೇಮದಲ್ಲಿ" ಮತ್ತು ನಿನ್ನ ಅಪಾರ ಕ್ಷಮೆಯಲ್ಲಿ "ನಿನ್ನ ಶಿಕ್ಷೆಯಿಂದ". "ನಿನಗೆ ವಿರುದ್ಧವಾಗಿ ನಿನ್ನಲ್ಲೇ ನಾನು ಆಶ್ರಯವನ್ನು ಬೇಡುತ್ತೇನೆ" ಮತ್ತು ನಿನ್ನ ಮಹಿಮೆಯ ಗುಣಗಳಲ್ಲಿ ಸೇರಿದ ನಿನ್ನ ಸುಂದರವಾದ ಗುಣಗಳಲ್ಲಿ ಆಶ್ರಯವನ್ನು ಬೇಡುತ್ತೇನೆ. ಏಕೆಂದರೆ ನಿನ್ನ ವಿರುದ್ಧ ನಿನ್ನ ಹೊರತು ಬೇರೆ ಯಾರೂ ರಕ್ಷಿಸುವುದಿಲ್ಲ. ಅಲ್ಲಾಹನಿಗೆ ವಿರುದ್ಧವಾಗಿ ಅವನ ಹೊರತು ರಕ್ಷಣೆ ಅಥವಾ ಆಶ್ರಯ ನೀಡುವವರು ಯಾರೂ ಇಲ್ಲ. "ನನಗೆ ನಿನ್ನ ಪ್ರಶಂಸೆಯನ್ನು ಎಣಿಸಲು ಸಾಧ್ಯವಿಲ್ಲ" ಅಂದರೆ, ನಿನಗೆ ಅರ್ಹವಾಗುವಂತೆ ನಿನ್ನ ಅನುಗ್ರಹ ಮತ್ತು ದಯೆಯನ್ನು ಎಣಿಸಲು ಮತ್ತು ಸಂಖ್ಯೆಯಲ್ಲಿ ಹೇಳಲು ನಾನು ಅಶಕ್ತನಾಗಿದ್ದೇನೆ. ನಾನು ಅದಕ್ಕಾಗಿ ಪ್ರಯತ್ನಿಸಿದರೂ ಸಹ. "ನೀನು ನಿನ್ನನ್ನು ಪ್ರಶಂಸಿಸಿದಂತೆ" ಅಂದರೆ, ನಿನ್ನ ಘನತೆಗೆ ಹೊಂದಿಕೆಯಾಗುವ ರೀತಿಯಲ್ಲಿ ನಿನ್ನ ಸಾರವನ್ನು ಪ್ರಶಂಸಿಸಲು ನಿನಗೆ ಮಾತ್ರ ಸಾಧ್ಯ. ನಿನ್ನ ಪ್ರಶಂಸೆಯ ಹಕ್ಕನ್ನು ಪೂರೈಸಲು ಯಾರಿಗೆ ತಾನೇ ಸಾಧ್ಯವಿದೆ?!

http://www.sunnah.global/hadeeth/kn/show/3566